**OS No: 50/2015** **DW: 1**

**ದಿಃ 06-01-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಪ್ರತಿವಾದಿಗಳ ಪರ ಶ್ರೀ ಎಸ್.ಎನ್.ಎಸ್. ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರ ರೂಪದಲ್ಲಿ ಸಲ್ಲಿಸಿರುತ್ತೇನೆ. ಅದನ್ನು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ. ಓದಿಸಿ ತಿಳಿದುಕೊಂಡು ಸಹಿ ಹಾಕಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಸತ್ಯದಿಂದ ಕೂಡಿವೆ.

ಮೂಲ ಖರೀದಿ ಪತ್ರವನ್ನು ಹಾಜರುಪಡಿಸಿದ್ದು ನಿ.ಡಿ.1 ಎಂದು, ಸಂಬಂಧಿಸಿದ ನಕಾಶೆಯನ್ನು ನಿ.ಡಿ.2 ಎಂದು, ವರ್ಗಾವಣೆ ಆದೇಶ ಪತ್ರವನ್ನು ನಿ.ಡಿ.3 ಎಂದು, ಇನ್ನೊಂದು ವರ್ಗಾವಣೆ ಆದೇಶದ ನಕಲನ್ನು ನಿ.ಡಿ.4 ಎಂದು, ಕಟ್ಟಡ ಪರವಾನಗಿಯನ್ನು ನಿ.ಡಿ.5 ಎಂದು, ಸಂಬಂಧಿಸಿದ ನಕಾಶೆಯನ್ನು ನಿ.ಡಿ.6 ಎಂದು, ಮೂಲ ಖರೀದಿ ಪತ್ರ ಸಂಖ್ಯೆ 1753 ನ್ನು ನಿ.ಡಿ.7 ಎಂದು, ಸಂಬಂಧಿಸಿದ ನಕಾಶೆಯನ್ನು ನಿ.ಡಿ.8 ಎಂದು, ವರ್ಗಾವಣೆ ಆದೇಶ ಪತ್ರವನ್ನು ನಿ.ಡಿ.9 ಎಂದು, ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ನಿ.ಡಿ.10 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಶ್ರೀ. ಎಸ್.ಪಿ. ವಕೀಲರಿಂದ**

ವಕೀಲರ ಪರವಾಗಿ ಎಮ್.ಆರ್.ಡಿ. ವಕೀಲರು ಹಾಜರಿದ್ದು ಮಧ್ಯಾಹ್ನ 03:00 ಗಂಟೆವರೆಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**-Sd-**
**ಪ್ರ.ದ.ನ್ಯಾ.ದಂ.ಗಳು, ಶಹಬಾದ**

**ಪಾಟೀ ಸವಾಲು: ಶ್ರೀ. ಎಸ್.ಪಿ. ವಕೀಲರಿಂದ**

ದಾವಾ ಆಸ್ತಿ ಮತ್ತು ನಿವೇಶನ ಸಂಖ್ಯೆ: 45 ನ್ನು ವಾದಿ ಮೊದಲಿಗೆ ವಿಠ್ಠಲ ತಂದೆ ಗುಂಡಪ್ಪ ಇವರ ಕಡೆಯಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ, ಅದೇ ರೀತಿ ನನ್ನ ತಂದೆ ನಿವೇಶನ ಸಂಖ್ಯೆ: 47 ಮತ್ತು 48 ನೇದ್ದವುಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ನನ್ನ ತಂದೆ ತನ್ನ ಸ್ವಂತ ಹಣದಲ್ಲಿ ನಿವೇಶನಗಳನ್ನು ಖರೀದಿ ಮಾಡಿದ್ದಾರೆ. ನನ್ನ ತಂದೆ ಮತ್ತು ವಾದಿ ಖರೀದಿ ಮಾಡಿದ ಆಸ್ತಿಗಳ ಮೂಲ ಮಾಲೀಕರು ಒಬ್ಬರೇ ಇದ್ದು ನಿವೇಶನಗಳು ಒಂದೇ ಲೇ ಔಟದಲ್ಲಿ ಇವೆ ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ನಡುವೆ ಯಾವುದೇ ವಿಭಾಗ ವಗೈರಾ ಆಗಿಲ್ಲ. ನನ್ನ ತಾಯಿ ಬೇರೆಯವರಿಗೆ ಹಣ ಕೊಡುವುದು ಬಾಕಿ ಇತ್ತು ಆ ಸಂಬಂಧ ಅವರು ನಿವೇಶನ ಸಂಖ್ಯೆ: 48 ನ್ನು ಮಾರಾಟ ಮಾಡಲು ಹೊರಟಿದ್ದರು ಕಾರಣ ನಾನೇ ಹಣ ಕೊಟ್ಟು ನನ್ನ ಹೆಸರಿಗೆ ಖರೀದಿ ಪತ್ರ ಮಾಡಿಕೊಂಡಿದ್ದೇನೆ. ನಿ.ಪಿ.4 ನಮ್ಮ ನಿವೇಶನಗಳು ಇರುವ ಲೇ ಔಟ ನಕಾಶೆ ಇರುತ್ತದೆ ಎಂದರೆ ಸರಿ. ನಿವೇಶನ ಸಂಖ್ಯೆ: 45 ರಿಂದ 48 ಒಂದಕ್ಕೆ ಒಂದು ಹೊಂದಿಕೊಂಡು ಇವೆ ಎಂದರೆ ಸರಿ. ಸದರಿ ನಿವೇಶನಗಳನ್ನು ಅಳತೆ ಮಾಡಿಸಲು ನನ್ನದು ಯಾವುದೇ ತಕರಾರು ಇಲ್ಲ. ಆದರೆ ಕೋರ್ಟಿನಿಂದ ಆ ಬಗ್ಗೆ ಆದೇಶ ಆಗಬೇಕು. ನಾವು ನಿವೇಶನ ಸಂಖ್ಯೆ: 47 ರ ಕುರಿತು ಕಟ್ಟಡ ಪರವಾನಗಿಯನ್ನು ಪಡೆದುಕೊಂಡು ನಿವೇಶನ ಸಂಖ್ಯೆ: 46

ರಲ್ಲಿ ಮನೆಯನ್ನು ಕಟ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿವೇಶನ ಸಂಖ್ಯೆ: 46 ರಲ್ಲಿ ನಮಗೆ ಯಾವುದೇ ಹಕ್ಕು ಇರದಿದ್ದರೂ ಕೂಡ ಕಾನೂನು ಬಾಹಿರವಾಗಿ ಅದರಲ್ಲಿ ಮನೆಯನ್ನು ಕಟ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಮನೆಯನ್ನು ಕಟ್ಟಿಸುವ ಕಾಲಕ್ಕೆ ಕೂಡ ವಾದಿ ಬಂದು ಅವಸರದಲ್ಲಿ ಮನೆ ಕಟ್ಟಿಸುವುದು ಬೇಡ ಇನ್ನೊಂದು ಬಾರಿ ಅಳತೆ ಮಾಡಿಸಿ ಎಂದು ನಮ್ಮನ್ನು ಕೇಳಿಕೊಂಡಿದ್ದಳು ಮತ್ತು ತಕರಾರು ಮಾಡಿದ್ದಳು ಎಂದರೆ ಸರಿಯಲ್ಲ. ನಮಗೆ ಸಂಬಂಧ ಇರದಿದ್ದರೂ ಕೂಡ ನಿವೇಶನ ಸಂಖ್ಯೆ: 46 ರಲ್ಲಿ ಮನೆಯನ್ನು ಕಟ್ಟಿಸಿ ವಾದಿಗೆ ತೊಂದರೆ ಕೊಟ್ಟು ಲುಕ್ಸಾನು ಮಾಡಿದ್ದೇವೆ ಎಂದರೆ ಸರಿಯಲ್ಲ. ನಿವೇಶನ ಸಂಖ್ಯೆ 46 ರಲ್ಲಿ ಮನೆ ಕಟ್ಟಿದ್ದರೂ ಕೂಡ ಇಲ್ಲವೆಂದು ಸುಳ್ಳು ಹೇಳುತ್ತಿದ್ಧೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**-Sd-**
**ಪ್ರ.ದ.ನ್ಯಾ.ದಂ.ಗಳು, ಶಹಬಾದ**